ದಿನಾಂಕಃ 17.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ತೀರ್ಪುಋಣಿದಾರರ ಪರ ವಕೀಲರಿಂದ:**

1. ಸ.ನಂ.153 ಕ್ಕೆ ಚಂದ್ರೇಗೌಡರವರು 30 ಗುಂಟೆಗೆ ನಮಗೆ ತೊಂದರೆ ಮಾಡಿರುತ್ತಾರೆ.

2. ಸದರಿ ಜಮೀನಿಗೆ ಸಂಬಂಧಪಟ್ಟಂತೆ ನಾನು ಇದೇ ನ್ಯಾಯಾಲಯದಲ್ಲಿ ಅ.ದಾ.310/1983 ರಂತೆ ದಾವೆಯನ್ನು ಹೂಡಿದ್ದೆ. ಸದರಿ ಡಿಕ್ರಿ ಕಾಪಿಯನ್ನು ಈ ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ.

3. ಅ.ದಾ.175/14 ರ ಡಿಕ್ರಿ 2021 ರಲ್ಲಿ ಆಗಿದೆ. ಸ.ನಂ.153 ರ 10 ಗುಂಟೆ ಸಬಂಧಪಟ್ಟ ದಾವೆಯಾಗಿದೆ.

4. ಎದುರುದಾರರು ಸ.ನಂ.153 ರ 2 ಎಕರೆ 5 ಗುಂಟೆಯನ್ನು ಒತ್ತುವರಿ ಮಾಡಲು ಪ್ರಯತ್ನಿಸಿದ್ದಾರೆ. ಸದರಿ ವಿಚಾರವನ್ನು ನನ್ನ ಪ್ರಮಾಣಪತ್ರದಲ್ಲಿ ಹೇಳಿರುವುದು ನನಗೆ ನೆನಪಿಲ್ಲ.

5. 1 ನೇ ಎದುರುದಾರರು ಚಂದ್ರೇಗೌಡರವರು ಈಗ ಮರಣ ಹೊಂದಿದ್ದಾರೆ ಎಂದರೆ ಸರಿ.

6. ಚಂದ್ರೇಗೌಡರವರಿಗೆ ಸಂತೋಷ್ ಮತ್ತು ಸುನಿಲ್ ಎಂಬ ಮಕ್ಕಳಿದ್ದಾರೆ. ಸಂತೋಷ್ ನ್ನು ಮಾತ್ರ ಪಕ್ಷಗಾರನ್ನಾಗಿ ಮಾಡಿಲ್ಲ. ಉಳಿದ ಸುನಿಲ್ ಮತ್ತು ಚಂದ್ರಮ್ಮ ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ.

7. ದಿ.08.11.2020 ರಲ್ಲಿ ರಜತ್, ಶರತ್ ಮತ್ತು ಚೈತ್ರಾ ರವರು ಸ.ನಂ.153 ರ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿರುತ್ತಾರೆ. ಸದರಿರವರನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರ ಎಂದರೆ? ನನಗೆ ನೆನಪಿಲ್ಲ.

8. ಸ.ನಂ.153 ರಲ್ಲಿ ಚಂದ್ರೆಗೌಡವರಿಗೆ 30 ಗುಂಟೆ ಜಮೀನು ಇದೆ.

9. ಅವರ ಜಮೀನಿಗೆ ಸಂಬಂಧಪಟ್ಟಂತೆ ಅ.ದಾ.ಸಂ.204/1995 ರಲ್ಲಿ ಚಂದ್ರೇಗೌಡರವರು ನಿಮ್ಮ ಮೇಲೆ ಹಾಗೂ ನಿಮ್ಮ ತಂದೆ ಹಾಗೂ ಸಹೋದರರ ಮೇಲೆ ಹಾಕಿ, ಅವರ ಪರವಾಗಿ ಡಿಕ್ರಿಯಾಗಿದೆ ಎಂದರೆ ಇರಬಹುದು.

10. ನಮ್ಮ ಜಮೀನಿನ ಪೂರ್ವ ದಿಕ್ಕಿನಿಂದ ಅತೀಕ್ರಮ ಪ್ರವೇಶ ಮಾಡಿರುತ್ತಾರೆ. ಪೂರ್ವ ದಿಕ್ಕಿನಲ್ಲಿ ಸ.ನಂ.216 ರ ಜಮೀನು ಇದೆ.

11. ನಮ್ಮ ಜಮೀನು 10 ಗುಂಟೆ ಜಮೀನಿನ ಪೂರ್ವಕ್ಕೆ ಚಂದ್ರೇಗೌಡರವರ ಸ.ನಂ.153 ಬರುತ್ತದೆ. ಸದರಿ 10 ಗುಂಟೆ ನಿಮ್ಮ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

12. ಪುಟ್ಟೇಗೌಡರವರು ನನಗೆ ಗೊತ್ತು. ಈಗ ಸದರಿ ಪುಟ್ಟೇಗೌಡರವರು ನಿಮ್ಮ 10 ಗುಂಟೆ ಜಮೀನು ಅವರ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

13. ದಿ.08.11.2020 ರಂದು ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೀರ ಎಂದರೆ? ನನಗೆ ನೆನಪಿಲ್ಲ.

14. ನಿಪಿ-5 ರ ನೋಟೀಸ್ ನ ಚೆಕ್ಕುಬಂದಿಗೂ, ಅರ್ಜಿಯಲ್ಲಿ ಹೇಳಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ? ನನಗೆ ಗೊತ್ತಿಲ್ಲ.

15. ಅರ್ಜಿಯಲ್ಲಿ ನಿಮ್ಮ ಜಾಗದ ಪೂರ್ವಕ್ಕೆ ನಿಮ್ಮ ಜಾಗ ಬರುತ್ತದೆ ಎಂದು ತಿಳಿಸಿದ್ದೀರ ಎಂದರೆ ಸರಿ.

16. ಅ.ದಾ.ಸಂ.175/2014 ರಲ್ಲಿ ಚಂದ್ರೇಗೌಡರವರ ಮಕ್ಕಳು ಪಾರ್ಟಿಯಲ್ಲ ಎಂದರೆ ಸರಿ.

17. ಚಂದ್ರೇಗೌಡರವರು ಮರಣ ಹೊಂದಿರುವ ಕಾರಣ ಸದರಿ ಅರ್ಜಿಯನ್ನು ಸಲ್ಲಿಸಲು ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾಧಂ.,
ಮೂಡಿಗೆರೆ.